# ನಾಡು-ನುಡಿಗೆ ಸೇವೆಗೈದ ನಾರೀಮಣಿಯರು

**ಸರಸ್ವತಿ ವಿಜಯನಾರಸಿಂಹ**

ತಮ್ಮ ಸಾರ್ಥಕ ಜೀವನದಿಂದ ಸ್ಫೂರ್ತಿಯುತವಾದ ವಿಚಾರಗಳನ್ನು ನೀಡಿದ ಕರ್ನಾಟಕದ ಇತಿಹಾಸದಲ್ಲಿನ ಐವರು ಧೀಮಂತ ಮಹಿಳೆಯರ ಕುರಿತು ಬರೆದಿರುವ ಲೇಖಕಿ ಬೆಂಗಳೂರಿನ ನಿವಾಸಿ.

ಕನ್ನಡ ಸಾರಸ್ವತ ಭಂಡಾರವನ್ನು ಸಂಪದ್ಭರಿತಗೊಳಿಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂಬುದು ಕನ್ನಡ ಸಾಹಿತ್ಯಾಸಕ್ತರಿಗೆ ತಿಳಿದಿರುವ ವಿಷಯವೇ ಆಗಿದೆ. ಜೀವನಾನುಭವದಿಂದ ಹಾಗೂ ಅನುಭಾವದಿಂದ ಪಡೆದ ಬೆಳಕನ್ನು ತಮ್ಮ ಭಕ್ತಿಪೂರ್ಣ ರಚನೆಗಳಿಂದ ನೀಡುವ ಮೂಲಕ ಸಾಮಾಜಿಕ ಮೌಲ್ಯಗಳ ಪುನರುತ್ಥಾನಕ್ಕಾಗಿ ದುಡಿದ ಮಹಿಳೆಯರು ಈ ನಾಡಿನಲ್ಲಿ ಅಮರರಾಗಿ ಶೋಭಿಸುತ್ತಿದ್ದಾರೆ. ಇವರೆಲ್ಲ ಸಾಮಾನ್ಯ ಸ್ತ್ರೀಯಂತೆ ಭಯಭೀತಿಗಳಿಂದ ಅನ್ಯಾಯ, ಶೋಷಣೆಗಳಿಗೊಳಗಾಗಿ ಸುಮ್ಮನೆ ಕುಳಿತವರಲ್ಲ. ಎಂತಹ ಕಷ್ಟಗಳಿಗೂ ಕುಗ್ಗದೆ, ದಿಟ್ಟತನದಿಂದ, ಎಲ್ಲವನ್ನೂ ಕಬಳಿಸುವ ಕಾಲವನ್ನೇ ಮೀರಿ ನಿಂತ ದೇವತೆಯರು ಇವರು.

ಮಹಿಳೆಯ ಶೋಷಣೆ ಸದಾಕಾಲ ನಡೆಯುತ್ತಲೇ ಬಂದಿದೆ. ಆಕೆಯನ್ನು ಅಬಲೆಯೆಂದು ಕರೆದು ಮೂಲೆಗೆ ತಳ್ಳುವ ವಿಧಾನ ಎಲ್ಲಿಂದ ತಲೆದೋರಿತೋ ಏನೋ? ಇದರ ವಿರುದ್ಧ ಹೋರಾಟವೂ ಅಷ್ಟೇ ಬಿರುಸಾಗಿ ನಡೆಯುತ್ತಲೇ ಬಂದಿದೆ. ಮಹಿಳೆ ತನ್ನನ್ನು ತಾನೆ ಉದ್ಧರಿಸಿಕೊಳ್ಳುವುದೊಂದೆ ಇದಕ್ಕೆ ಪರಿಹಾರ. ಕಷ್ಟಗಳನ್ನು ಲೆಕ್ಕಿಸದೆ ನಿಚ್ಚಳ ಮನಸ್ಸಿನಿಂದ ಜೀವನದ ಗುರಿಯತ್ತ ಮುನ್ನಡೆದ ಧೀಮಂತ ಮಹಿಳೆಯರು ಅನೇಕರಿದ್ದಾರೆ. ಇವರಿಂದ ನಮ್ಮ ನಾಡಿನ ನಾರೀಮಣಿಯರು ಸ್ಫೂರ್ತಿ ಹೊಂದಲಿ ಎಂಬುದೇ ಈ ಲೇಖನದ ಉದ್ದೇಶ. ಐಹಿಕ ಸುಖಗಳನ್ನು ತೃಣವಾಗಿ ಕಂಡು, ಮಾನವ ಜೀವನದ ಸಾರ್ಥಕ್ಯವನ್ನು ಆಧ್ಯಾತ್ಮಿಕ ಜೀವನದ ಮೂಲಕ ಕಂಡು ಕೊಂಡವರ ಕುರಿತು ಈ ಲೇಖನ. ಜೀವನದ ಪರಮ ಸತ್ಯ ವನ್ನು ಕಾಣುವುದೇ ಮಾನವ ಜೀವನದ ಗುರಿ ಹಾಗೂ ಸ್ತ್ರೀಶಕ್ತಿಯ ಧ್ಯೇಯ. ಮಹಿಳಾಶಕ್ತಿ ಮಾತೃಶಕ್ತಿಯಾಗಿ ತನ್ನವರನ್ನು ಹೇಗೆ ಉದ್ಧರಿಸಬಲ್ಲದೆಂಬುದನ್ನು ಆದರ್ಶವಾಗಿ ತೋರಿಸಿ, ಮೇಲ್ಪಂಕ್ತಿಯಾಗಿ ಮೆರೆದಿದ್ದಾರೆ ಈ ದೇವಿಯರು. ನಾವು ಅವರ ಜೀವನದಿಂದ ಸ್ಫೂರ್ತಿ ಪಡೆದು, ಮುನ್ನಡೆ ಸಾಧಿಸಿ, ಭರವಸೆಯ ಫಲ ಗಳಿಸಿ ಬೆಳಕನ್ನು ಕಾಣೋಣ.

**ಮಹಾದೇವಿಯಕ್ಕ** : ಅಕ್ಕಮಹಾದೇವಿ ರುದ್ರಕನ್ನಿಕೆ; ಸರ್ವಾಂತರ್ಯಾಮಿಯಾದ ದೇವರನ್ನು ಎಲ್ಲೆಲ್ಲೂ ಕಂಡು, ಶಿವನೇ ಗಂಡನೆಂದು ತನ್ನ ಆತ್ಮವನ್ನೂ ಜೀವನವನ್ನೂ ಶಿವಕಾರ್ಯಕ್ಕೆ ಅರ್ಪಣ ಮಾಡಿದವಳು. ಧೀಮಂತ ವ್ಯಕ್ತಿತ್ವವುಳ್ಳ ಅಕ್ಕಮಹಾದೇವಿ ೧೨ನೇ ಶತಮಾನವನ್ನು ಬೆಳಗಿದ



ಶ್ರೀಶೈಲದಲ್ಲಿರುವ ಅಕ್ಕಮಹಾದೇವಿಯ ಪ್ರತಿಮೆ

ಉಜ್ವಲ ಪ್ರತಿಭೆ. ಈಕೆ ಉಡುತಡಿಯ ನಿರ್ಮಲ ಸೆಟ್ಟಿ ಹಾಗೂ ಸುಮತಿ ಎಂಬ ವೀರಶೈವ ದಂಪತಿಗಳ ಮಗಳು. ಹುಟ್ಟಿನಿಂದಲೇ ಈಕೆಯಲ್ಲಿ ಭಕ್ತಿ, ವೈರಾಗ್ಯ ನೆಲೆಸಿದ್ದವು. ಶ್ರೀಶೈಲದ ಮಲ್ಲಿಕಾರ್ಜುನ ಈಕೆಯ ಇಷ್ಟದೈವ. ಸಂಪೂರ್ಣ ವಾಗಿ ತನ್ನ ಆರಾಧ್ಯದೇವನಿಗೆ ತನ್ನನ್ನು ಅರ್ಪಿಸಿಕೊಂಡು ಅವನನ್ನೇ ಪತಿಯೆಂದು ಪರಿಗಣಿಸುತ್ತಿದ್ದಳು. ತನ್ನ ದೈವದ ಆರಾಧನೆಯಲ್ಲಿಯೇ ಮಗ್ನಳಾಗಿದ್ದ ಈಕೆಯನ್ನು ಊರಿನ ರಾಜ ಕೌಶಿಕ ವಿವಾಹವಾಗಲು ಬಯಸಿದ. ಮದುವೆಯಾಗಿ ಲೌಕಿಕ ಜೀವನ ನಡೆಸಲು ಇಷ್ಟವಿಲ್ಲದಿದ್ದರೂ ತನ್ನ ತಾಯ್ತಂದೆ ಯರಿಗೆ ರಾಜನಿಂದ ಒದಗಬಹುದಾದ ತೊಂದರೆಗಳನ್ನು ನೆನೆದು ಮೂರು ಷರತ್ತುಗಳನ್ನೊಡ್ಡಿ ಅವನನ್ನು ಮದುವೆ ಯಾಗಲು ಒಪ್ಪಿದಳು.

ಕೌಶಿಕ ಜೈನಧರ್ಮೀಯನಾಗಿದ್ದು, ಪ್ರಾಪಂಚಿಕ ವ್ಯವಹಾರ ದಲ್ಲಿ ಆಸಕ್ತನಾಗಿದ್ದ ಭವಿ, ಅನುರಾಗಿ. ಮಹಾದೇವಿ ವಿರಾಗಿಣಿ, ನಿರಾಸಕ್ತೆ, ಆಧ್ಯಾತ್ಮಿಕ ಜೀವಿ. ಹಾಗಾಗಿ ಈ ದಾಂಪತ್ಯ ಹೆಚ್ಚು

ಕಾಲ ಉಳಿಯಲಿಲ್ಲ. ಕೌಶಿಕನು ತನ್ನ ಷರತ್ತುಗಳನ್ನು ಮುರಿದಾಗ ಅಕ್ಕಮಹಾದೇವಿಯು ಅವನನ್ನು ತ್ಯಜಿಸಿ ತನ್ನ ದೈವವಾದ ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಹೊರಟಳು. ದಾರಿಯಲ್ಲಿ ಎದುರಾದ ದುರ್ಭರ ಪ್ರಸಂಗಗಳನ್ನು ಶಿವನಿಷ್ಠೆಯಿಂದ ಎದುರಿಸಿದಳು. ದೃಢಭಕ್ತಿಯಿಂದ ಕೇಶಾಂಬರಿಯಾಗಿ ಈಕೆ ಕಲ್ಯಾಣಕ್ಕೆ ಬಂದಳು. ಶಿವಶರಣರ ಕೈಲಾಸವಾಗಿದ್ದ ಅನುಭವ ಮಂಟಪದಲ್ಲಿ ಶಿವಶರಣರ ಪರೀಕ್ಷೆಗೆ ಒಳಪಟ್ಟು ಅಲ್ಲಮಪ್ರಭುವಿನಿಂದಲೂ, ಬಸವಣ್ಣನವರಿಂದಲೂ ವೀರ ವಿರಾಗಿಣಿಯೆಂದು ಮನ್ನಣೆ ಪಡೆದಳು. ಅನುಭಾವಿಗಳ ಸಂಗದಲ್ಲಿ ಸುಖ ಹಾಗೂ ಶಾಂತಿಗಳನ್ನು ಕಂಡು ಕೆಲಕಾಲ ಅಲ್ಲೇ ನಿಂತಳು. ಅಲ್ಲಿಂದ ತನ್ನ ಗಮ್ಯಸ್ಥಾನವಾದ ಶ್ರೀಶೈಲಕ್ಕೆ ನಡೆದು ಕದಳಿಯ ವನದಲ್ಲಿಯೇ ನೆಲೆಸಿದಳು. ಚೆನ್ನ ಮಲ್ಲಿಕಾರ್ಜುನನನ್ನು ಮಧುರಭಾವದಿಂದ ಆರಾಧಿಸಿ ಸಾಕ್ಷಾತ್ಕಾರ ಪಡೆದು ಶ್ರೀಶೈಲದಲ್ಲಿಯೇ ತನ್ನ ಇಷ್ಟದೈವದ ಸಾನ್ನಿಧ್ಯ ಪಡೆದಳು. ಅಲ್ಲಿಯೇ ಬಯಲಾದಳು.

ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಈಕೆ ಮಾಡಿದ ಸಾಧನೆ ಅಪೂರ್ವವಾದುದು. ಶ್ರೇಷ್ಠ ಅನುಭಾವಿ ಮಾತ್ರವಲ್ಲದೆ ಈಕೆ ಶ್ರೇಷ್ಠ ವಚನಕಾರ್ತಿ. 'ಚೆನ್ನಮಲ್ಲಿಕಾರ್ಜುನ' ಎಂಬುದು ಈಕೆಯ ವಚನಗಳ ಅಂಕಿತ. ಸೃಷ್ಟಿಯಲ್ಲಿ ಒಂದಾಗಿಯೂ ಸೃಷ್ಟಿಯಿಂದ ಬೇರಾಗಿಯೂ ಇರುವ ಭಗವಂತನ ನಿಲುವನ್ನು ಬಹಳ ಪರಿಣಾಮಕಾರಿಯಾಗಿ ತನ್ನ ವಚನಗಳಲ್ಲಿ ಚಿತ್ರಿಸಿದ್ದಾಳೆ ಈಕೆ. ವಚನಗಳನ್ನಲ್ಲದೆ ತಾತ್ತ್ವಿಕ ವಿಷಯನಿರೂಪಣೆಯುಳ್ಳ ಗ್ರಂಥವನ್ನೂ ಈಕೆ ರಚಿಸಿದ್ದಾಳೆ. ಸಾರಸ್ವತ ಲೋಕಕ್ಕೆ ಈಕೆಯ ಕೊಡುಗೆ ಅಪೂರ್ವವಾದುದು. ದೊಡ್ಡ ಧಾರ್ಮಿಕ ಚಳವಳಿಗಾಗಿ ನಾಡನ್ನೆಲ್ಲಾ ಸುತ್ತಿ, ವಚನಗಳಲ್ಲಿ ತನ್ನ ಕಾಣ್ಕೆಯನ್ನು ಬೀರಿ, ಆವೇಶ ಹುಟ್ಟಿಸಿದವಳು.

* **ಚಂದನವ ಕಡಿದು ಕೊರೆದು ತೇದಡೆ**
  **ನೊಂದೆನೆಂದು ಕಂಪು ಬಿಟ್ಟಿತ್ತೆ..**
* **ಬೆಟ್ಟದಾ ಮೇಲೊಂದು ಮನೆಯ ಮಾಡಿ**
  **ಮೃಗಗಳಿಗಂಜಿದೊಡೆಂತಯ್ಯ ....**
* **ಚಿಲಿಪಿಲಿ ಎಂದೋಡುವ ಗಿಳಿಗಳಿರಾ**
  **ನೀವು ಕಾಣಿರೆ, ನೀವು ಕಾಣಿರೆ, ಎನ್ನ ಚೆನ್ನಮಲ್ಲಿಕಾರ್ಜುನನ!**

ಈ ವಚನಗಳಲ್ಲಿ ಅನುಭವದ ತೀವ್ರತೆ ಘನೀಭೂತವಾಗಿರುವುದು ಕಂಡುಬರುತ್ತದೆ. ಚೆನ್ನಮಲ್ಲಿಕಾರ್ಜುನನಿಗಾಗಿ ಕಾತರಿಸಿ ಕಳವಳಪಟ್ಟ ಅಂತರಂಗದ ಎಲ್ಲ ತುಮುಲಗಳೂ, ಆಸೆ ನಿರಾಸೆಗಳೂ ಈಕೆಯ ವಚನಗಳಲ್ಲಿ ವ್ಯಕ್ತವಾಗುತ್ತವೆ. ವಚನ ಸಾಹಿತ್ಯದಲ್ಲಿ ಅಕ್ಕನ ಹೆಸರು ಚಿರಸ್ಥಾಯಿ.

**ಹೆಳವನಕಟ್ಟೆ ಗಿರಿಯಮ್ಮ:** ಈಕೆ ಪ್ರಸಿದ್ಧ ಕವಯಿತ್ರಿ. ರಾಣಿಬೆನ್ನೂರು ಈಕೆಯ ತವರು ಮನೆ. ಹೆಳವನಕಟ್ಟೆ ಶಾನುಭೋಗರ ಪತ್ನಿಯಾಗಿ ಇಲ್ಲಿಗೆ ಬಂದಳು. ಹರಿಹರ ತಾಲ್ಲೂಕಿನ ಮಲೇ ಬೆನ್ನೂರ ಬಳಿ ಇರುವ ಹೆಳವನಕಟ್ಟೆಗೆ ಬಂದಮೇಲೆ ಅಲ್ಲಿಯ ರಂಗನಾಥ ಸ್ವಾಮಿಯ ಭಕ್ತೆಯಾಗಿ ಅನೇಕ ಕವಿತೆಗಳನ್ನು ರಚಿಸಿದಳು. ಚಂದ್ರಹಾಸನ ಕತೆ, ಸೀತಾಕಲ್ಯಾಣ, ಉದ್ದಾಲಕನ ಕತೆ ಎಂಬ ಸಾಂಗತ್ಯ ಕೃತಿಗಳನ್ನು ರಚಿಸಿದ್ದಾಳೆ. ಹೆಳವನಕಟ್ಟೆಯ ರಂಗನಾಥನ ಪರಮ ಭಕ್ತೆಯಾಗಿ ಈಕೆ ಹಲವಾರು ಪವಾಡಗಳನ್ನೂ ಮೆರೆದಿದ್ದಾಳೆ. ಪರರ ಇಂಗಿತವನ್ನು ತಿಳಿಯುವ ಜ್ಞಾನವನ್ನು ಪಡೆದಿದ್ದ ಈಕೆ ಜನಮಾನಸದಲ್ಲಿಯೂ ಉತ್ತಮ ಸ್ಥಾನ ಪಡೆದಿದ್ದಳು. ಕಮ್ಮಾರಗಟ್ಟೆ ಎಂಬಲ್ಲಿ ಮಾರುತಿ ದೇವಸ್ಥಾನವನ್ನೂ, ತುಂಗಭದ್ರಾ ನದಿಗೆ ಸೋಪಾನಗಳನ್ನೂ ಕಟ್ಟಿಸಿದಳು. ಕೊನೆಯ ದಿನಗಳಲ್ಲಿ ಮೈಲಾರ, ಕೊಕ್ಕನೂರು, ಗೋಕರ್ಣ, ದಿಳ್ಳಂಗಿರಿ, ದಾಗಿನಕಟ್ಟೆ ಮೊದಲಾದೆಡೆ ಪಾದಯಾತ್ರೆ ಮಾಡಿದ್ದಳು. ತುಂಬು ಪ್ರವಾಹವಿದ್ದ ತುಂಗಭದ್ರೆಯಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ನಡೆದು ನದಿಯಲ್ಲಿ ಐಕ್ಯಳಾದಳೆಂದು ಪ್ರತೀತಿ. ಈಕೆ ಸ್ಥಾಪಿಸಿದ ಮಾರುತಿ ದೇವಾಲಯದ ಉತ್ಸವ ಈಗಲೂ ನಡೆಯುತ್ತದೆ. ಈಕೆ ರಚಿಸಿದ ಕೃತಿಗಳು ಭಗವಂತನೊಡನೆ ಈಕೆಗಿದ್ದ ನಿಕಟ ಬಾಂಧವ್ಯವನ್ನು ನಿರೂಪಿಸುತ್ತವೆ. ಗ್ರಾಮ್ಯ ಭಾಷೆಯ ಸೊಬಗು ಈಕೆಯ ರಚನೆಗಳಿಗೆ ಮೆರುಗು ನೀಡುತ್ತದೆ.

**ಸಂಚಿಯ ಹೊನ್ನಮ್ಮ:** ಚಿಕ್ಕದೇವರಾಜ ಒಡೆಯರ ಬಳಿ ಈಕೆ ಸಂಚಿಯ ಊಳಿಗದವಳಾಗಿದ್ದಳೆಂದು ತಿಳಿದುಬರುತ್ತದೆ. ಮೈಸೂರು ಜಿಲ್ಲೆಯ ಯಳಂದೂರು ಈಕೆಯ ಜನ್ಮಸ್ಥಳ. ಚಿಕ್ಕದೇವರಾಜನ ಪಟ್ಟದರಸಿಯೂ ಇದೇ ಊರಿನವರಾದುದರಿಂದ ಇಬ್ಬರಲ್ಲೂ ಬಾಲ್ಯದಿಂದಲೂ ಸ್ನೇಹ ಬೆಳೆದು ಬಂದಿತ್ತು. ಸುಶೀಲೆಯೂ, ಪ್ರತಿಭಾನ್ವಿತೆಯೂ ಆದ ಈಕೆ ದೊರೆಯ ಕೃಪಾಕಟಾಕ್ಷಕ್ಕೆ ಪಾತ್ರಳಾಗಿದ್ದಳು. ಆಸ್ಥಾನದ ಹಿರಿಯ ವಿದ್ವಾಂಸರಾದ ಸಿಂಗರಾರ್ಯ, ತಿರುಮಲಾರ್ಯರಲ್ಲಿ ಕಾವ್ಯಶಾಸ್ತ್ರವನ್ನೂ, ಪುರಾಣಧರ್ಮಶಾಸ್ತ್ರಗಳನ್ನೂ ಈಕೆ ಅಧ್ಯಯನ ಮಾಡಿದಳು. ಅಳಸಿಂಗರಾರ್ಯರು ಈಕೆಯನ್ನು "ಈ ಹೊನ್ನಿ ಸರಸಸಾಹಿತ್ಯದ ವರದೇವತೆ" ಎಂದು ಹೊಗಳಿದರು.

ಈ ಹೊಗಳಿಕೆಯನ್ನು ತನ್ನ ಪಟ್ಟಮಹಿಷಿಗೆ ತಿಳಿಸಿದ ಚಿಕ್ಕದೇವರಾಜರು ಒಂದು ಉತ್ತಮ ಗ್ರಂಥವನ್ನು ಬರೆಯುವಂತೆ ಈಕೆಯನ್ನು ಪ್ರೋತ್ಸಾಹಿಸಿದರು. ರಾಜರಾಣಿಯರ ಸೂಚನೆಯಂತೆ ಹೊನ್ನಮ್ಮ ಕಾವ್ಯರಚನೆ ಕೈಗೊಂಡಳು. "ಹದಿಬದೆಯ ಧರ್ಮ" ಈಕೆಯ ಕಾವ್ಯರಚನೆ. ಭಾರತೀಯ ಸ್ತ್ರೀಯ ಸ್ಥಾನಮಾನ, ಪತಿವ್ರತಾಧರ್ಮದ ನಿಯಮಗಳು,

ಮೊದಲಾದ ವಿಷಯಗಳನ್ನು ಹೊನ್ನಮ್ಮ ಸುಂದರವಾಗಿ ವರ್ಣಿಸಿದ್ದಾಳೆ. "**ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು**" ಎಂದು ಹೆಣ್ಣನ್ನು ಅಸಡ್ಡೆ ಮಾಡುವವ ರನ್ನು ಹೊನ್ನಮ್ಮ ಹೀಗಳೆದಿದ್ದಾಳೆ. ನೀತಿ ನಿರೂಪಣೆಯೇ ಈಕೆಯ ಕೃತಿಯ ಪರಮೋದ್ದೇಶ. ಹೇಳುವ ವಿಷಯವನ್ನು ಅರ್ಥವತ್ತಾಗಿ ಹೇಳುವಲ್ಲಿ ಹೊನ್ನಮ್ಮನ ಕಾವ್ಯಶಕ್ತಿ ಮೆರೆದಿದೆ. ವಿದ್ವಜ್ಜನರ ಮನ್ನಣೆಯನ್ನೂ, ಜನಸಾಮಾನ್ಯರ ಪ್ರೀತಿಯನ್ನೂ ಪಡೆದ ಹೊನ್ನಮ್ಮ ಸಾರಸ್ವತ ಲೋಕದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾಳೆ. ಹೊನ್ನಮ್ಮ ಸೌಮ್ಯಮೂರ್ತಿ; ಮನೆಮಕ್ಕಳ, ಗಂಡಹೆಂಡಿರ, ಗೃಹಸ್ಥಾಶ್ರಮದ ಧರ್ಮದ ಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ, ನಿತ್ಯಸಂಸಾರದ ನಿಷ್ಕಾಮ ಕರ್ಮವೇ ಭಗವಂತನನ್ನು ಪಡೆಯುವ ಹಾದಿ ಎಂದು ಸಾರಿದಳು.

**ಸಾಧ್ವಿಶಿರೋಮಣಿ ಕುರಡಗಿ ತಿಮ್ಮಮ್ಮ:** ಈಕೆ ಲಿಂಗಸುಗೂರು ತಾಲೂಕಿನ ಕುರಡಗಿ ಗ್ರಾಮದ ನರಸಿಂಹಾಚಾರ್ಯ ಮತ್ತು ಚಂದ್ರಲಾದೇವಿಯ ಮಗಳು. ತಿರುಪತಿ ತಿಮ್ಮಪ್ಪನ ಭಕ್ತರಾದ ತಾಯಿ ತಂದೆಯರು ಮಗಳಿಗೆ ತಿಮ್ಮಮ್ಮನೆಂದು ಹೆಸರಿಟ್ಟರು. ಮನೆಯಲ್ಲಿ ಯಾವಾಗಲೂ ಪುರಾಣ, ಪುಣ್ಯಕಥೆ, ವೇದಾಧ್ಯಯನ, ಶಾಸ್ತ್ರಾರ್ಥಗಳ ಚರ್ಚೆ ನಡೆಯುತ್ತಿದ್ದ ಕಾರಣ ಮಗುವಿನ ಮೇಲೂ ಇದರ ಪ್ರಭಾವ ಉಂಟಾಯಿತು. ಆಟಪಾಠಗಳಲ್ಲೂ ಇದು ಪ್ರಭಾವ ಬೀರಿತು. ಉತ್ಕಟವಾದ ದೈವಭಕ್ತಿ ಈಕೆಯಲ್ಲಿ ಬೇರೂರಿತು. ಆಗಿನ ಸಂಪ್ರದಾಯ ದಂತೆ ಎಂಟನೇ ವಯಸ್ಸಿಗೇ ಈಕೆಗೆ ಮದುವೆಯಾಯಿತು. ಹತ್ತನೇ ವಯಸ್ಸಿನಲ್ಲಿ ಈಕೆ ಪತಿಯನ್ನು ಕಳೆದುಕೊಂಡಳು. ಐಹಿಕವಾಗಿ ಬಂದೊದಗಿದ ಈ ಘೋರ ದುಃಖವನ್ನು ನುಂಗಿಕೊಂಡು, ಹರಿಯನ್ನು ಸ್ಮರಿಸುತ್ತ ಭಗವದ್ಧ್ಯಾನದಲ್ಲಿಯೇ ಲೀನಳಾದಳು. ದಂಡ, ಕಮಂಡಲು ಮತ್ತು ಗೋಪಾಳಬುಟ್ಟಿ ಧರಿಸಿ ಮಧುಕರಿಗೆ ಹೊರಟಳು. ಧ್ಯಾನ, ಜಪ, ತಪಾದಿಗಳಿಂದ ಅಭೂತಪೂರ್ವವಾದ ವಾಕ್ಸಿದ್ಧಿಯನ್ನು ಪಡೆದು ಆಶುಕವಿತ್ವದಲ್ಲಿ ಹೆಸರು ಗಳಿಸಿದಳು. ಈಕೆಯ ಚೇತನ ಯಾರೊಬ್ಬರ ನೋವನ್ನೂ ಸಹಿಸುತ್ತಿರಲಿಲ್ಲ. ಕುಹಕಿಗಳು ಈ ತಾಪಸಿಯನ್ನು ಅವಹೇಳನ ಮಾಡಲು ಹೋಗಿ ತಾವೇ ಅಪಹಾಸ್ಯಕ್ಕೆ ಗುರಿಯಾದರು. ಅಂಥವರನ್ನೂ ಸಂತೈಸಿ ಅವರ ಬಾಯಿಂದ 'ಅಮ್ಮ' ಎಂದು ಕರೆಸಿಕೊಂಡು ಅವರಲ್ಲಿ ಭಗವದ್ಭಕ್ತಿ ಮೂಡುವಂತೆ ಮಾಡು ತ್ತಿದ್ದಳು. ಈಕೆ ಪ್ರತಿವರ್ಷ ತಿರುಪತಿಗೆ ಕಾಲ್ನಡಿಗೆಯಲ್ಲೇ ಹೋಗು ತ್ತಿದ್ದಳು. ಅಧ್ಯಾತ್ಮ ಚರ್ಚೆಯಲ್ಲಿ ದಿನಗಳೆಯುವುದು ಈಕೆಗೆ ಪರಮಪ್ರಿಯವಾಗಿತ್ತೆಂದು ತಿಳಿದುಬರುತ್ತದೆ. ಈಕೆಯ ವೃಂದಾ ವನವನ್ನು 'ಅಮ್ಮನ ಕಟ್ಟೆ' ಎಂದು ಕರೆಯುತ್ತಾರೆ. ಕುರಡಗಿ ಗ್ರಾಮದಲ್ಲಿ ಈಕೆಯ ಆರಾಧನೆಯನ್ನು ಶ್ರದ್ಧೆಯಿಂದ ನಡೆಸುತ್ತಾರೆ.

**ಸಜ್ಜಲಗುಡ್ಡದ ಶರಣಮ್ಮನವರು:** ಹನ್ನೆರಡನೆಯ ಶತಮಾನದ ಶಿವಶರಣೆಯರಂತೆ ಈಕೆಯ ಅಧ್ಯಾತ್ಮ ಜೀವನ ನಡೆದು ಬಂದಿದೆ. ರಾಯಚೂರ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮುದೇನೂರಿನ ಹಾಲುವಾತದಲ್ಲಿ ಈಕೆಯ ಜನನ. ಈಕೆಯ ತಾಯಿ ಲಿಂಗಮ್ಮ ಶಿವಶರಣೆ. ಮುದೇನೂರಿನಲ್ಲಿದ್ದ ಜಮೀನನ್ನು ದುಷ್ಟರು ಕಬಳಿಸಿದ್ದರಿಂದ ಸಜ್ಜಲಗುಡ್ಡಕ್ಕೆ ಬಂದು ನೆಲೆಸಿದರು ಈ ತಾಯಿಮಗಳು. ತಾಯಿ ಈಕೆಯನ್ನು ಅಕ್ಷರಸ್ಥೆಯಾಗಿ ಮಾಡಿದಳು. ಮಗಳು ಗ್ರಂಥಗಳನ್ನು ಓದುವ ಮಟ್ಟಕ್ಕೆ ಬಂದಾಗ ತಾಯಿಗಾದ ಆನಂದ ವರ್ಣನಾತೀತ. ಸಂಸಾರದಲ್ಲಿ ತಾನುಂಡ ಕಹಿ ಮಗಳಿಗೆ ಬಾರದಿರಲಿ ಎಂದು ಈಕೆ ಮಗಳು 'ಯಮುನೆ'ಯನ್ನು ಸುಜ್ಞಾನಿಯಾಗಿಸಿದಳು. ನಿಜಗುಣರ ಅನುಭವಸಾರ, ಜ್ಞಾನಸಿಂಧು ಗ್ರಂಥಗಳನ್ನು ಮಗಳಿಂದ ಓದಿ ಕೇಳಿ ತಾಯಿ ಆನಂದ ಪಡುತ್ತಿದ್ದಳು. ಮಗಳಲ್ಲಿ ವೈರಾಗ್ಯ ಮೈಗೂಡಿತು. ಗುಡ್ಡದೂರದ ದೊಡ್ಡ ಬಸವಾರ್ಯರಿಂದ ಯಮುನಮ್ಮನಿಗೆ ಶಿವದೀಕ್ಷೆಯಾಯಿತು. ಶಿವಶರಣೆಯಾದ ಈಕೆ ಶರಣಮ್ಮಳೆಂದೇ ಪ್ರಖ್ಯಾತಿ ಪಡೆದಳು. ಉಪವಾಸ, ಜಪ, ತಪ, ಧ್ಯಾನಗಳಲ್ಲಿಯೇ ಈಕೆಯ ಜೀವನ ಸಾರ್ಥಕ್ಯ ಪಡೆಯಿತು. ಈಕೆಯ ವಾಣಿ ಪ್ರಸಾದವಾಣಿ ಯಾಯಿತು. ಈಕೆ ತನ್ನ ಅನುಗ್ರಹದಿಂದ ಭಕ್ತರನ್ನು ಹರಸು ತ್ತಿದ್ದಂತೆಯೇ ನಡೆಯುತ್ತಿತ್ತು ಎಂದು ಪ್ರತೀತಿ. 'ಮುಗಿದ ಕೈ ಬಾಗಿದ ಬೆನ್ನಿ'ನಿಂದಲೇ ಸಕಲರನ್ನೂ ತನ್ನತ್ತ ಸೆಳೆಯುತ್ತಿದ್ದಳು ಈಕೆ. ಸಮಾಜದಲ್ಲಿ ಸಂಸ್ಕೃತಿ, ಭಕ್ತಿಯನ್ನು ಬೆಳೆಸುವುದೇ ಈಕೆಯ ಗುರಿಯಾಗಿತ್ತು. ಈಕೆಯ ಸಮಾಧಿ ಇಂದಿಗೂ ಭಕ್ತರ ಯಾತ್ರಾಸ್ಥಳವಾಗಿದೆ.

✪

## ಆಶ್ರಮದ ವಿಶೇಷ ಉತ್ಸವದ ದಿನಗಳು

### ಸೆಪ್ಟೆಂಬರ್ ೨೦೦೬

| | | |
|---|---|---|
| ೦೪ | ಏಕಾದಶಿ | ಸೋಮವಾರ |
| ೧೫ | ಸ್ವಾಮಿ ಅಭೇದಾನಂದ ಜಯಂತಿ | ಶುಕ್ರವಾರ |
| ೧೮ | ಏಕಾದಶಿ | ಸೋಮವಾರ |
| ೨೨ | ಸ್ವಾಮಿ ಅಖಂಡಾನಂದ ಜಯಂತಿ | ಶುಕ್ರವಾರ |
| ೨೯ | ದುರ್ಗಾಪೂಜಾ ಮಹಾಸಪ್ತಮಿ | ಶುಕ್ರವಾರ |
| ೩೦ | ದುರ್ಗಾಪೂಜಾ ಮಹಾಷ್ಟಮಿ | ಶನಿವಾರ |